ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

75 ಸ್ವಾತಂತ್ರ್ಯದ ಅಮೃತ ಮಹೋತ್ಸವ

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

ಕವಿಪ್ರನಿನಿ/ಬಿ9/39331/16-17

ದಿನಾಂಕ : 25 JUL 2022

## ಸುತ್ತೋಲೆ

ವಿಷಯ:- ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ ಮತ್ತು ನಿಯಮಗಳನ್ನು ನಿಗಮದ ಎಲ್ಲಾ ಸಂಗ್ರಹಣಾ ಪ್ರಾಧಿಕಾರಿಗಳು ಕಟ್ಟುನಿಟ್ಟಾಗಿ ಪಾಲಿಸುವ ಬಗ್ಗೆ.

ಉಲ್ಲೇಖ:-
1. ಸರ್ಕಾರದ ಆದೇಶ ಸಂಖ್ಯೆ: ಆ.ಇ 522 ವೆಚ್ಚ 12/2021 ದಿನಾಂಕ 13/12/2021.
2. ಸರ್ಕಾರದ ಆದೇಶ ಸಂಖ್ಯೆ: ಆ.ಇ 522 ವೆಚ್ಚ-12/2021 ದಿನಾಂಕ 07/05/2022.
3. ಸರ್ಕಾರದ ಸುತ್ತೋಲೆ ಸಂಖ್ಯೆ: ಆ.ಇ 128 ವೆಚ್ಚ-12/2021 ದಿನಾಂಕ 10/05/2022.
4. ಸರ್ಕಾರದ ಸುತ್ತೋಲೆ ಸಂಖ್ಯೆ: ಆ.ಇ 263 ವೆಚ್ಚ-12/2022 ದಿನಾಂಕ 11/05/2022.
5. ಸರ್ಕಾರದ ಅಧಿಸೂಚನೆ ಸಂಖ್ಯೆ: ಆ.ಇ 522 ವೆಚ್ಚ-12/2021 ದಿನಾಂಕ 16/05/2022.
6. Government e-market place ರವರ ಇ-ಮೇಲ್ ಪತ್ರ ದಿನಾಂಕ 12/05/2022.
7. ಸರ್ಕಾರದ ಅಧೀನ ಕಾರ್ಯದರ್ಶಿಗಳು (ಆಡಳಿತ), ಸಾರ್ವಜನಿಕ ಉದ್ದಿಮೆಗಳ ಇಲಾಖೆ ರವರ ಪತ್ರ ಸಂಖ್ಯೆ ಸಾಉಇ 69 ಎಂಇಎ 2022 ದಿನಾಂಕ 24/05/2022.

* * * * * * * * *

ರಾಜ್ಯದ ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳು ಅಗತ್ಯವಿರುವ ಸರಕುಗಳ ಖರೀದಿ, ಸೇವೆಗಳ ಪಡೆದುಕೊಳ್ಳುವಿಕೆ ಮತ್ತು ಕಾಮಗಾರಿಗಳ ನಿರ್ವಹಣೆಯನ್ನು ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಉಲ್ಲೇಖದ ಆದೇಶ/ಸುತ್ತೋಲೆಗಳಲ್ಲಿ ನೀಡಿರುವ ಸೂಚನೆಗಳನ್ನು ಪಾಲಿಸುವಂತೆ ಹಾಗೂ Government e-market place ನಲ್ಲಿ ರಾಜ್ಯದ ಸಾರ್ವಜನಿಕ ಉದ್ದಿಮೆಗಳು Online ವ್ಯವಹಾರ ನಡೆಸಲು ನೋಂದಣಿ ಮಾಡಿಕೊಳ್ಳುವಂತೆ ಸೂಚಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ನಿಗಮದ ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳು ಉಲ್ಲೇಖದ ಸರ್ಕಾರದ ಆದೇಶ/ಸುತ್ತೋಲೆಗಳಲ್ಲಿ ನೀಡಿರುವ ಸೂಚನೆಗಳನ್ನು ನಿರ್ಮಾಣ ಕಾಮಗಾರಿಗಳು, ಟೆಂಡರ್ ಪ್ರಕ್ರಿಯೆ, ಸರಕು ಸಂಗ್ರಹಣೆ ಮತ್ತು ಸೇವೆಗಳನ್ನು ಪಡೆಯುವಲ್ಲಿ ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಲಾಗಿದೆ.

ಈ ಸಂಬಂಧ, ಉಲ್ಲೇಖದ ಸರ್ಕಾರದ ಆದೇಶ/ಸುತ್ತೋಲೆಗಳನ್ನು ನಿಗಮದ ಅಂತರ್ಜಾಲದಲ್ಲಿ ಅನುಸರಣೆಗಾಗಿ ಪ್ರಕಟಿಸಲಾಗಿದೆ.

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕವಿಪ್ರನಿನಿ, ಬೆಂಗಳೂರು.

**ಪ್ರತಿಗಳು:-**

1. ಎಲ್ಲಾ ಮುಖ್ಯ ಇಂಜಿನಿಯರುಗಳು (ವಿ), ಕವಿಪ್ರನಿನಿ.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
3. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
4. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ)/ (ಸಿವಿಲ್), ಕವಿಪ್ರನಿನಿ.
5. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
6. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು – ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ)/ (ಸಿವಿಲ್), ಕವಿಪ್ರನಿನಿ.
8. ಎಲ್ಲಾ ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
9. ಲೆಕ್ಕಾಧಿಕಾರಿ (ಕೋಡೀಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಆ ಮತ್ತು ಮಾ. ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

# PROCEEDINGS OF THE GOVERNMENTOF KARNATAKA

Sub : Pre-Tender Scrutiny of Tenders and Estimates for Procurement of Goods and Services including Construction Works – Reg.

Ref : Karnataka Transparency in Public Procurements Act, 1999 and Rules, 2000.

PREAMBLE:

Karnataka Transparency in Public Procurements (KTPP) Act, 1999 was enacted to provide for transparency in the tender process and to regulate the procedure in inviting, processing and accepting the tenders. Procurement Entity, as defined in Section 2(d) of the KTPP Act, has to procure Goods and Services by inviting the tenders as per Section 5 of the KTPP Act and the tenders, so invited are being processed and awarded by following the provisions of the Act, Rules and instructions issued by the Government from time to time. Now it is felt necessary to enhance this transparency to secure competition and equal opportunity to all the tenderers by having a mechanism of Pre-Tender Scrutiny of Tenders and Estimates for Procurement of Goods and Services including Construction Works before publication of the Tender.

Hence the following order.

## GOVERNMENT ORDER NO:FD 522 EXP-12/2021, BENGALURU,

## DATED: 13th December 2021

In view of the circumstances explained in the preamble, Government of Karnataka is pleased to undertake the Pre-Tender Scrutiny of the tenders and estimates regarding Procurement of Goods and Services including Construction Works, the value of which exceeds Rs.50.00 Crore in the following manner:

1. There shall be a Pre-Tender Scrutiny Committee headed by a retired Hon'ble High Court Judge and two other members having expertise in Engineering and Finance respectively.

2. The Government may by an order, appoint a retired Hon'ble High Court Judge and two other members having expertise in Engineering and Finance respectively for a term of two years.
3. Government may, at its own discretion, set up one or more such committees.
4. During the period of the appointment of retired Hon'ble High Court Judge, if there arises a vacancy due to the resignation or any other reason, the Government may, within one month appoint another retired Hon'ble High Court Judge to carry out the functions of the Pre-Tender Scrutiny Committee.
5. The Government shall provide required employees/staff and other facilities to the Pre-Tender Scrutiny Committee for the expeditious discharge of its functions.
6. The Terms and Conditions for the functioning of the Pre-Tender Scrutiny Committee are as below:

   i. The Pre-Tender Scrutiny Committee, so constituted as above, shall scrutinize the tenders and estimates prepared for procurement of Goods and Services including Construction Works exceeding Rs.50 crore in value, for which the provisions of the KTPP Act are applicable.
   ii. The tenders and estimates of the procurements exceeding Rs.50.00 crore shall be examined by the Pre-Tender Scrutiny Committee before they are published to ensure that they are in conformity with the provisions of KTPP Act, Rules, procedures and guidelines prescribed by the Government.
   iii. The Pre-Tender Scrutiny Committee shall further verify that the tender related documents are just, equitable, transparent and provide for equal opportunity and contain the suitable provisions for protection of the interest of the Procurement Entity.

iv. The Tender Accepting Authority shall cause to submit the copy of the tenders, estimates and other related documents to the Pre-Tender Scrutiny Committee immediately after the Administrative Approval and Technical Sanction.

v. The Pre-Tender Scrutiny Committee if required, may call for the necessary documents and records related to the procurement. The Tender Accepting Authority shall cause to provide such records to ensure that the Pre-Tender Scrutiny of tenders and estimates can be conducted in a smooth and expeditious manner.

vi. The Pre-Tender Scrutiny Committee shall cause the documents as submitted in para (iv) above to be published on Karnataka Public Procurement Portal for seven days and invite the suggestions from the Public.

vii. The Pre-Tender Scrutiny Committee shall scrutinize the tenders and estimates and consolidate the suggestions so received from the public and give their recommendations to the Tender Accepting Authority within 30 days from the date of receipt of the document.

viii. The Tender Accepting Authority shall consider the recommendations so received as per para (vii) above and make modifications to the tender documents. In case, any of the recommendations of the Committee cannot be accepted, then Tender Accepting Authority should give reasons to be recorded in writing and intimate the same to the committee. But no modifications in the provisions of the Standard Tender Documents shall be made without the approval of the Government.

ix. Centre for e-Governance, DPAR (e-Governance) shall make necessary modifications in the Karnataka Public Procurement Portal for displaying the tenders, estimates and other related documents by the Pre-Tender Scrutiny Committee and for receiving the suggestions from the public.

x. Government shall, by an order, fix the consolidated remuneration for the retired Hon'ble High Court Judge and members of the Pre Tender Scrutiny committee from time to time.

(7) All the Procurement Entities as defined under Section 2(d) of KTPP Act are hereby directed to follow the above instructions scrupulously in respect of procurements for which the provisions of the KTPP Act are applicable. It may be noted that any violation of KTPP Act, 1999 and Rules, 2000 attracts the Penal Provisions under Section 23 of the Act.

(8) This order will apply for the procurements from the date notified by the Government separately.

By order and in the name of
Governor of Karnataka

(SHREEKRISHNA N. BUGATYAGOL)
Special Officer (ZP) and Ex-Officio
Joint Secretary to Government
Finance Department

To:
The Compiler, Karnataka Gazette for publication in the next issue of the Gazette.

Copy to:

1. The Chief Secretary/Additional Chief Secretaries to Government
2. The Principal Secretaries and Secretaries to Government.
3. The Accountant General (A&E), Karnataka Bengaluru.
4. The Secretary, Karnataka Legislative Assembly/Council.
5. The Registrar, Karnataka High Court, Bengaluru.
6. The Registrar, Karnataka Lokayukta, Bengaluru.
7. The Secretary, Karnataka Public Services Commission, Bengaluru.
8. The Joint Secretary to Government of Karnataka, Cabinet Section (On Cabinet Decision vide Subject Case No:445/2021, dated:08.11.2021).
9. All Deputy Commissioners.
10. All the CEOs of Zilla Panchayats.
11. All Registrars of Universities.
12. All the Heads of Departments.
13. All the CEOs of Boards and Corporations.
14. All Internal Financial Advisors.
15. All Joint Secretaries/Deputy Secretaries/Special Officers/Under Secretaries to Government, Finance Department.
16. Section Guard File/Spare Copies.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ನಿರ್ಮಾಣ ಕಾಮಗಾರಿಗಳೂ ಸೇರಿದಂತೆ ಸರಕು ಮತ್ತು ಸೇವೆಗಳ ಸಂಗ್ರಹಣೆಯ ಟೆಂಡರ್ ಮತ್ತು ಅಂದಾಜುಗಳ ಪರಿಶೀಲನೆಗೆ ಟೆಂಡರ್ ಪೂರ್ವ ಪರಿಶೀಲನಾ ಸಮಿತಿಯನ್ನು ರಚಿಸುವ ಕುರಿತು.

ಓದಲಾಗಿದೆ : ಸರ್ಕಾರದ ಆದೇಶ ಸಂ.ಆಇ 522 ವೆಚ್ಚ-12/2021, ಬೆಂಗಳೂರು, ದಿನಾಂಕ:13.12.2021.

**ಪ್ರಸ್ತಾವನೆ:**

ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯನ್ನು ಹೆಚ್ಚಿಸುವ ಮತ್ತು ಎಲ್ಲಾ ಟೆಂಡರ್‌ದಾರರಿಗೆ ಸ್ಪರ್ಧೆ ಮತ್ತು ಸಮಾನ ಅವಕಾಶವನ್ನು ಖಚಿತಪಡಿಸುವ ಉದ್ದೇಶದಿಂದ ರೂ.50.00 ಕೋಟಿ ಮೀರಿದ ಎಲ್ಲಾ ನಿರ್ಮಾಣ ಕಾಮಗಾರಿಗಳೂ ಸೇರಿದಂತೆ ಸರಕು ಮತ್ತು ಸೇವೆಗಳ ಸಂಗ್ರಹಣೆಗಾಗಿ ತಯಾರಿಸಿದ ಟೆಂಡರ್ ಮತ್ತು ಅಂದಾಜುಗಳ ಟೆಂಡರ್ ಪೂರ್ವ ಪರಿಶೀಲನೆಯನ್ನು ಅವುಗಳ ಪ್ರಕಟಣಾ ಪೂರ್ವದಲ್ಲಿ ಕೈಗೊಳ್ಳಲು ತೀರ್ಮಾನಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಅಂತಹ ಒಂದು ಟೆಂಡರ್ ಪೂರ್ವ ಪರಿಶೀಲನಾ ಸಮಿತಿಯನ್ನು ರಚಿಸಲು ಮತ್ತು ಸದರಿ ಸಮಿತಿಗೆ ಒದಗಿಸಬೇಕಾದ ಸೌಲಭ್ಯಗಳು ಹಾಗೂ ಸಮಿತಿಯ ಸದಸ್ಯರುಗಳಿಗೆ ನೀಡಲಾಗುವ ಸಂಭಾವನೆಯನ್ನು ನಿಗಧಿಪಡಿಸಲು ತೀರ್ಮಾನಿಸಲಾಗಿರುತ್ತದೆ.

ಆದುದರಿಂದ, ಈ ಕೆಳಕಂಡಂತೆ ಆದೇಶ.

**ಸರ್ಕಾರದ ಆದೇಶ ಸಂ:ಆಇ 522 ವೆಚ್ಚ-12/2021, ಬೆಂಗಳೂರು, ದಿನಾಂಕ:07-05-2022**

1. ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಮಾನ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಇಬ್ಬರು ಇತರೆ ಸದಸ್ಯರನ್ನೊಳಗೊಂಡ ಟೆಂಡರ್ ಪೂರ್ವ ಪರಿಶೀಲನಾ ಸಮಿತಿಯನ್ನು ಈ ಕೆಳಗಿನಂತೆ ರಚಿಸಲು ಸರ್ಕಾರವು ಹರ್ಷಿಸುತ್ತದೆ.

| | |
|---|---|
| ಮಾನ್ಯ ಶ್ರೀಮತಿ ನ್ಯಾಯಮೂರ್ತಿ ರತ್ನಕಲಾ,<br>ನಿವೃತ್ತ ನ್ಯಾಯಮೂರ್ತಿಗಳು,<br>ಕರ್ನಾಟಕ ಉಚ್ಚ ನ್ಯಾಯಾಲಯ. | ಸಮಿತಿಯ ಮುಖ್ಯಸ್ಥರು |
| ಶ್ರೀ ಬಿ.ಜಿ.ಗುರುಪಾದಸ್ವಾಮಿ,<br>ನಿವೃತ್ತ ಸರ್ಕಾರದ ಕಾರ್ಯದರ್ಶಿಗಳು,<br>ಜಲಸಂಪನ್ಮೂಲ ಇಲಾಖೆ, ಕರ್ನಾಟಕ ಸರ್ಕಾರ | ತಾಂತ್ರಿಕ ಪರಿಣಿತರು |
| ಶ್ರೀ ಕೆ.ನಂದಕುಮಾರ್,<br>ನಿವೃತ್ತ ನಿರ್ದೇಶಕರು,<br>ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಕರ್ನಾಟಕ ಸರ್ಕಾರ | ಆರ್ಥಿಕ ಪರಿಣಿತರು |



fice by SHANTAPPA LAMANI, DPE-SECTION 3-ASST-INC(SLM), ASSISTANT, PUBLIC ENTERPRISES DEPARTMENT SEC on 24/05/2022 11:11 AM

2. ಸಮಿತಿಯಲ್ಲಿರುವ ಮಾನ್ಯ ನಿವೃತ್ತ ನ್ಯಾಯಮೂರ್ತಿಗಳು, ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಇತರ ಇಬ್ಬರು ಸದಸ್ಯರ ಸೇವಾ ಅವಧಿ ಮತ್ತು ಕಾರ್ಯಸೂಚಿಯ ಷರತ್ತು ಮತ್ತು ನಿಬಂಧನೆಗಳು ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ ನಿಗದಿಪಡಿಸಲಾಗಿರುವಂತೆ ಇರುತ್ತದೆ.

3. ಮೇಲೆ ರಚಿಸಲಾದ ಸಮಿತಿಯ ಕಾರ್ಯಾಲಯವು ಲೋಕೋಪಯೋಗಿ ಇಲಾಖೆಯಲ್ಲಿ ಕಾರ್ಯನಿರ್ವಹಿಸತಕ್ಕದ್ದು. ಮಾನ್ಯ ನಿವೃತ್ತ ನ್ಯಾಯಮೂರ್ತಿಗಳು, ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಇತರೆ ಇಬ್ಬರು ಸದಸ್ಯರುಗಳಿಗೆ ಸುಸಜ್ಜಿತವಾದ ಕಚೇರಿ, ಚಾಲಕರ ಸಮೇತ ಸರ್ಕಾರಿ ವಾಹನ ಹಾಗೂ ಸಹಾಯಕ ಸಿಬ್ಬಂದಿಗಳು ಮತ್ತು ಇತರೆ ಕಚೇರಿ ಸಿಬ್ಬಂದಿಗಳನ್ನು ಲೋಕೋಪಯೋಗಿ ಇಲಾಖೆಯಿಂದ ಒದಗಿಸತಕ್ಕದ್ದು.

4. ಮಾನ್ಯ ನಿವೃತ್ತ ನ್ಯಾಯಮೂರ್ತಿಗಳು, ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಇತರೆ ಇಬ್ಬರು ಸದಸ್ಯರುಗಳಿಗೆ ಕ್ರಮವಾಗಿ ಮಾಸಿಕ ರೂ.2.00 ಲಕ್ಷ ಮತ್ತು ರೂ.1.00 ಲಕ್ಷಗಳ ಸಂಚಿತ ಸಂಭಾವನೆಯನ್ನು ನಿಗದಿಪಡಿಸಲಾಗಿದೆ. ಟೆಂಡರ್ ಪೂರ್ವ ಪರಿಶೀಲನಾ ಸಮಿತಿಯ ಪ್ರಕಾರ್ಯಕ್ಕೆ ಸಂಬಂಧಿಸಿದಂತೆ, ಪ್ರವಾಸ ಕೈಗೊಂಡಲ್ಲಿ, ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಯನ್ನು ಅನ್ವಯವಾಗುವ ದರಗಳಲ್ಲಿ ಪಾವತಿಸಲಾಗುವುದು. ಸಮಿತಿಯ ಪ್ರತಿ ಸದಸ್ಯರುಗಳಿಗೆ ಮಾಸಿಕ ರೂ.3,000/- ಗಳ ಮಿತಿಯೊಳಗೆ ಬ್ರಾಡ್ ಬ್ಯಾಂಡ್ ಸೇರಿದಂತೆ ಗೃಹ ಮತ್ತು ಮೊಬೈಲ್ ದೂರವಾಣಿ ವೆಚ್ಚವನ್ನು ಪಾವತಿಸಲಾಗುವುದು

5. ಮೇಲೆ ನಿಗದಿಪಡಿಸಿದ ಸಂಚಿತ ಸಂಭಾವನೆ ಮತ್ತು ಭತ್ಯೆಗಳ ಹೊರತಾಗಿ, ಇತರ ಯಾವುದೇ ಭತ್ಯೆಗಳನ್ನು ಒದಗಿಸಲಾಗುವುದಿಲ್ಲ.

6. ಸಮಿತಿಯ ಉದ್ದೇಶಕ್ಕಾಗಿ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಇವರು ನಿರ್ಧರಿಸತಕ್ಕದ್ದು ಹಾಗೂ ಲೋಕೋಪಯೋಗಿ ಇಲಾಖೆಗೆ ಒದಗಿಸಲಾದ ಅನುದಾನದಲ್ಲಿ ಈ ಸಂಬಂಧದ ವೆಚ್ಚವನ್ನು ಭರಿಸತಕ್ಕದ್ದು.

ಈ ಆದೇಶವು ತಕ್ಷಣದಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಐ.ಎಸ್.ಎನ್.ಪ್ರಸಾದ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಆರ್ಥಿಕ ಇಲಾಖೆ

ಇವರಿಗೆ:
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಲು.



Generated from eOffice by SHANTAPPA LAMANI, DPE-SECTION 3-ASST-INC(SLM), ASSISTANT, PUBLIC ENTERPRISES DEPARTMENT SEC on 24/05/2022 11:11 AM

197

ಪ್ರತಿ:

(1) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ.

(2) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು.

(3) ಮಹಾಲೇಖಪಾಲರು (ಎ&ಇ), ಕರ್ನಾಟಕ ಸರ್ಕಾರ, ಬೆಂಗಳೂರು.

(4) ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಸಭೆ / ಕರ್ನಾಟಕ ವಿಧಾನ ಪರಿಷತ್ತು.

(5) ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.

(6) ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

(7) ಕಾರ್ಯದರ್ಶಿಗಳು, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು.

(8) ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.

(9) ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್.

(10) ರಾಜ್ಯದ ಎಲ್ಲಾ ಇಲಾಖಾ ಮುಖ್ಯಸ್ಥರು.

(11) ರಾಜ್ಯದ ಎಲ್ಲಾ ನಿಗಮ ಮತ್ತು ಮಂಡಳಿಗಳ ಕಾರ್ಯನಿರ್ವಹಣಾಧಿಕಾರಿಗಳು.

(12) ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು.

(13) ಸರ್ಕಾರದ ವಿಶೇಷ ಕಾರ್ಯದರ್ಶಿಗಳು/ಸರ್ಕಾರದ ಅಪರ ಕಾರ್ಯದರ್ಶಿಗಳು/ಸರ್ಕಾರದ ಜಂಟಿ ಕಾರ್ಯದರ್ಶಿಗಳು/ಸರ್ಕಾರದ ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ.

(14) ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

185

ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 128 ವೆಚ್ಚ-12/2021

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 10.05.2022

## ಸುತ್ತೋಲೆ

ವಿಷಯ: ಸಾರ್ವಜನಿಕ ಸಂಗ್ರಹಣೆಗಳಲ್ಲಿ ಟೆಂಡರ್ ಲಾಭಾಂಶವನ್ನು (Tender Premium) ಅನ್ನು ಶೇ.5 ಕ್ಕೆ ಮಿತಿಗೊಳಿಸುವ ಕುರಿತು.

ಉಲ್ಲೇಖ: ಸರ್ಕಾರದ ಸುತ್ತೋಲೆ ಸಂಖ್ಯೆ: PWD 1359 SOFC 2001 (P-2), ದಿನಾಂಕ:03.12.2002.

********

ಮೇಲೆ ಉಲ್ಲೇಖಿಸಿದ ಸರ್ಕಾರದ ಸುತ್ತೋಲೆಯಲ್ಲಿ ಟೆಂಡರ್‌ನಲ್ಲಿ ಸ್ವೀಕೃತವಾದ ದರಗಳು ಅಂದಾಜು ಮೊತ್ತಕ್ಕಿಂತ ಶೇ.10 ಕ್ಕಿಂತ ಹೆಚ್ಚಾಗಿದ್ದಲ್ಲಿ, ಅದನ್ನು ಗಣನೀಯ ಹೆಚ್ಚುವರಿ (substantially high) ಟೆಂಡರ್ ಎಂದು ಪರಿಗಣಿಸಲು ಮತ್ತು ಅಂತಹ ಸಂದರ್ಭದಲ್ಲಿ ಎಲ್ಲಾ ಟೆಂಡರುಗಳನ್ನು ರದ್ದುಪಡಿಸಿ ಮರುಟೆಂಡರ್ ಕರೆಯುವುದು ಪ್ರಥಮ ಆಯ್ಕೆಯಾಗಿರಬೇಕೆಂದು ತಿಳಿಸಲಾಗಿರುತ್ತದೆ. ಆದಾಗ್ಯೂ, ಹಲವಾರು ಸಂಗ್ರಹಣಾ ಪ್ರಾಧಿಕಾರಗಳು (Procurement Entities) ಪ್ರಸಕ್ತ ಶೇ.10 ಮತ್ತು ಅದಕ್ಕಿಂತ ಹೆಚ್ಚಿನ ದರಗಳಿಗೆ ಟೆಂಡರ್ ಅನುಮೋದಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ ಕುರಿತು ಪರಿಶೀಲಿಸಲಾಗಿ, ಸಾರ್ವಜನಿಕ ಸಂಗ್ರಹಣೆಗಳಲ್ಲಿ ಅಂದಾಜು ಮೊತ್ತದ ಮೇಲೆ ಶೇ.5 ಕ್ಕಿಂತ ಹೆಚ್ಚಿನ ಲಾಭಾಂಶವುಳ್ಳ (Tender Premium) ಟೆಂಡರ್‌ಅನ್ನು ಯಾವುದೇ ಕಾರಣಕ್ಕೂ ಅಂಗೀಕರಿಸತಕ್ಕದ್ದಲ್ಲ ಎಂದು ತಿಳಿಯಪಡಿಸಿದೆ. ಒಂದು ವೇಳೇ ಶೇ.5 ಕ್ಕಿಂತ ಹೆಚ್ಚಿನ ಮೊತ್ತದ ಲಾಭಾಂಶವುಳ್ಳ ಟೆಂಡರ್‌ಅನ್ನು ಅಂಗೀಕರಿಸ ಬಯಸಿದಲ್ಲಿ, ಸಮರ್ಥನೀಯ ಕಾರಣಗಳನ್ನು ಲಿಖಿತ ರೂಪದಲ್ಲಿ ದಾಖಲಿಸಿ, ಉನ್ನತ ಪ್ರಾಧಿಕಾರದ ಅನುಮೋದನೆ ಪಡೆದು ಅಂಗೀಕರಿಸತಕ್ಕದ್ದು.

ಮೇಲಿನ ನಿರ್ದೇಶನವನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುವುದನ್ನು ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳು ಖಚಿತಪಡಿಸಿಕೊಳ್ಳತಕ್ಕದ್ದು. ಸದರಿ ನಿರ್ದೇಶನದ ಉಲ್ಲಂಘನೆಯು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರ ಕಲಂ (23) ರ ಅನ್ವಯ ದಂಡನಾರ್ಹವಾಗಿರುತ್ತದೆ.

(ಐ.ಎಸ್.ಎನ್.ಪ್ರಸಾದ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಆರ್ಥಿಕ ಇಲಾಖೆ

ಇವರಿಗೆ,
ಸರ್ಕಾರದ ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳು.

184

ಕರ್ನಾಟಕ ಸರ್ಕಾರ

ಸಂಖ್ಯೆ : ಆಇ 263 ವೆಚ್ಚ-12/2022

ಕರ್ನಾಟಕ ಸರ್ಕಾರದ ಸಚಿವಾಲಯ
ಆರ್ಥಿಕ ಇಲಾಖೆ
ಬೆಂಗಳೂರು, ದಿನಾಂಕ:11.05.2022

## ಸುತ್ತೋಲೆ

ವಿಷಯ : ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಮತ್ತು ಬಿಲ್ಲುಗಳ ಪಾವತಿಗೆ ಸಂಬಂಧಿಸಿದಂತೆ ಸೂಚನೆಗಳನ್ನು ನೀಡುವ ಕುರಿತು.

ಉಲ್ಲೇಖ :
(1) ಸುತ್ತೋಲೆ ಸಂ:PWD 1359 SO/FC/2001, ದಿನಾಂಕ:25.10.2002 - Regarding Planning, Packages and Scheduling.
(2) ಸುತ್ತೋಲೆ ಸಂ:PWD 1359 So/FC/2002 (P-2) ದಿನಾಂಕ: 25.10.2002.
(3) ಸರ್ಕಾರದ ಆದೇಶ ಸಂ:FD 4 PCL 2008, ದಿನಾಂಕ:14.10.2008.
(4) ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿರವರ ಟಿಪ್ಪಣಿ ಸಂ:PSCM/2282/2022, ದಿನಾಂಕ:29.04.2022.

*****

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು, 2000 ರ ಅನ್ವಯ ಮತ್ತು ಅದರಡಿ ಸರ್ಕಾರದಿಂದ ಕಾಲಕಾಲಕ್ಕೆ ನೀಡಲಾಗುವ ಆದೇಶ ಮತ್ತು ಸುತ್ತೋಲೆಗಳನ್ವಯ ರಾಜ್ಯದಲ್ಲಿನ ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳು ಟೆಂಡರ್ ಪ್ರಕ್ರಿಯೆಯನ್ನು ಕೈಗೊಂಡು ಗುತ್ತಿಗೆ ವಹಿಸುವುದು ಕಡ್ಡಾಯವಾಗಿರುತ್ತದೆ. ಅದೇ ರೀತಿ ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆ ಪ್ಯಾರಾ 202 (10) ರಲ್ಲಿ ಕಾಮಗಾರಿಗಳ ಬಿಲ್ಲುಗಳನ್ನು first come first serve ಆಧಾರದ ಮೇಲೆ ಪಾವತಿ ಮಾಡಲು ತಿಳಿಸಲಾಗಿರುತ್ತದೆ. ಈ ಬಗ್ಗೆ ಕರ್ನಾಟಕ ಸ್ಟೇಟ್ ಕಂಟ್ರಾಕ್ಟರ್ ಅಸೋಸಿಯೇಷನ್‌ನ ಅಧ್ಯಕ್ಷರು ಮತ್ತು ಪದಾಧಿಕಾರಿಗಳೊಂದಿಗೆ ಮಾನ್ಯ ಮುಖ್ಯಮಂತ್ರಿಗಳು ನಡೆಸಿದ ಸಭೆಯಲ್ಲಿ ಚರ್ಚಿಸಲಾಗಿದೆ. ಮಾನ್ಯ ಮುಖ್ಯಮಂತ್ರಿಗಳ ನಿರ್ದೇಶನದಂತೆ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಮತ್ತು ಬಿಲ್ಲುಗಳ ಪಾವತಿಗೆ ಸಂಬಂಧಿಸಿದಂತೆ ಈ ಕೆಳಗಿನಂತೆ ಸೂಚನೆಗಳನ್ನು ನೀಡಲಾಗಿದೆ:

...2

1. ಉಲ್ಲೇಖ (1) ರ ಸರ್ಕಾರದ ಸುತ್ತೋಲೆಯಲ್ಲಿ ಸಾರ್ವಜನಿಕ ಸಂಗ್ರಹಣೆಗಳ ಪ್ಲಾನಿಂಗ್, ಪ್ಯಾಕೇಜಿಂಗ್ ಮತ್ತು ಶೆಡ್ಯೂಲಿಂಗ್ ಹಾಗೂ ಅನುದಾನ ಲಭ್ಯಗೊಳಿಸುವ ಬಗ್ಗೆ ತಿಳಿಸಲಾಗಿದ್ದು, ಕಾರ್ಯಯೋಜನೆಯ ಅನುಷ್ಠಾನವನ್ನು ಗಮನದಲ್ಲಿಟ್ಟುಕೊಂಡು ಪ್ಯಾಕೇಜಿಂಗ್ ಮಾಡುವುದನ್ನು ಪರಿಶೀಲಿಸಲು ತಿಳಿಸಲಾಗಿರುತ್ತದೆ. ಅದರಂತೆ ಪ್ಯಾಕೇಜಿಂಗ್ ಮಾಡುವ ಸಂದರ್ಭದಲ್ಲಿ ತಾಲ್ಲೂಕು ಮಟ್ಟದಲ್ಲಿ ಅನುಷ್ಠಾನಗೊಳಿಸುತ್ತಿರುವ ಕಾಮಗಾರಿಗಳ ಪ್ಯಾಕೇಜ್ ಮೊತ್ತವನ್ನು ಗರಿಷ್ಠ ರೂ.100.00 ಲಕ್ಷಗಳಿಗೆ ಸೀಮಿತಗೊಳಿಸತಕ್ಕದ್ದು.

2. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರ್ದರ್ಶಕತೆ ಅಧಿನಿಯಮ 1999 ರ ಕಲಂ 9 ರ ಅನ್ವಯ ಸಂಗ್ರಹಣಾ ಪ್ರಾಧಿಕಾರವು ಟೆಂಡರ್ ಅಹ್ವಾನಿಸುವ ಮತ್ತು ಅಂಗೀಕರಿಸುವ ಪ್ರಾಧಿಕಾರಗಳನ್ನು ನೇಮಕ ಮಾಡಬೇಕಾಗುತ್ತದೆ. ಈ ರೀತಿ ನೇಮಕಗೊಂಡ ತಾಲ್ಲೂಕು ಮಟ್ಟದ ಪ್ರಾಧಿಕಾರವು ತಾಲ್ಲೂಕು ಹಂತದಲ್ಲಿ, ಜಿಲ್ಲಾ ಮಟ್ಟದ ಪ್ರಾಧಿಕಾರವು ಜಿಲ್ಲಾ ಹಂತದಲ್ಲಿ ಮತ್ತು ರಾಜ್ಯ ಮಟ್ಟದ ಪ್ರಾಧಿಕಾರವು ರಾಜ್ಯಮಟ್ಟದಲ್ಲಿ ಆಯಾ ಸಂಗ್ರಹಣೆಗಳ ಟೆಂಡರ್‌ನ್ನು ಕರೆಯಲು ಕ್ರಮವಹಿಸತಕ್ಕದ್ದು.

3. ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದಿಂದ KW-1 ರಿಂದ KW-6 ರಲ್ಲಿ ಮಾದರಿ ದಾಖಲೆಗಳನ್ನು ನಿಗಧಿಪಡಿಸಿ ಆದೇಶ ಹೊರಡಿಸಲಾಗಿರುತ್ತದೆ. ಕ್ರಮವಾಗಿ ರೂ.50.00 ಲಕ್ಷಗಳಿಂದ ರೂ.100.00 ಲಕ್ಷಗಳವರೆಗೆ ಮತ್ತು ರೂ.100.00 ಲಕ್ಷಗಳನ್ನು ಮೀರಿದ ಅಂದಾಜು ಮೊತ್ತಗಳ ಕಾಮಗಾರಿಗಳಿಗೆ ಸಂಬಂಧಿಸಿದಂತೆ KW-3 ಮತ್ತು KW-4 ರ Clause 3.3(a) ರಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು 28(2)(b) ರನ್ವಯ ಟೆಂಡರುದಾರರಿಗೆ ಯಂತ್ರೋಪಕರಣಗಳ ಸಾಮರ್ಥ್ಯವನ್ನು ನಿಗಧಿಪಡಿಸಲಾಗಿರುತ್ತದೆ. ಪ್ರಸಕ್ತ ಇದನ್ನು ಪರಿಷ್ಕರಿಸಿ ರೂ.300.00 ಲಕ್ಷಗಳವರೆಗಿನ ಅಂದಾಜು ಮೊತ್ತದ ಕಾಮಗಾರಿಗಳಿಗೆ ಸದರಿ clause ನ ಅನ್ವಯಿಕೆಯಿಂದ ವಿನಾಯಿತಿ ನೀಡಲಾಗಿದೆ. ಉಳಿದಂತೆ ಇತರೆ ಎಲ್ಲಾ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

4. ಕಾಮಗಾರಿಗಳ ಬಿಲ್ಲುಗಳ ಪಾವತಿಗೆ ಸಂಬಂಧಿಸಿದಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆ ಸಂಹಿತೆ, ಪ್ಯಾರಾ 202(10) ರಲ್ಲಿ ಬಿಲ್ಲುಗಳ ಪಾವತಿಯನ್ನು first come first serve ಆದಾರದಲ್ಲಿ ಪಾವತಿ ಮಾಡಲು ತಿಳಿಸಲಾಗಿರುತ್ತದೆ. ಇದನ್ನು ಪುನರುಚ್ಚರಿಸುತ್ತಾ, ಕಡ್ಡಾಯವಾಗಿ ಗುತ್ತಿಗೆದಾರರ ಬಿಲ್ಲುಗಳನ್ನು ಅವುಗಳ ಜೇಷ್ಠತೆ ಆಧಾರದಲ್ಲಿ ಪಾವತಿ ಮಾಡಲು ಕ್ರಮವಹಿಸತಕ್ಕದ್ದು.

5. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯಿದೆ, 1999 ರ ಕಲ (6) ಅನ್ವಯ ಎಲ್ಲಾ ಟೆಂಡರ್ ಪ್ರಕ್ರಿಯೆಯನ್ನು ಕಾಯಿದೆ ಮತ್ತು ನಿಯಮಗಳಲ್ಲಿ ನಿಗಧಿಪಡಿಸಿದ ಪ್ರಕ್ರಿಯೆಗೆ ಅನುಸಾರವಾಗಿಯೇ ಕೈಗೊಳ್ಳಬೇಕಾಗಿರುತ್ತದೆ. ಅದೇ ರೀತಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು, 2000ರ ನಿಯಮ 21 ರಂತೆ ಟಂಡರ್ ದಾಖಲೆಗಳಲ್ಲಿ ನಿಗಧಿಪಡಿಸಿದ ಮಾನದಂಡಗಳ ಅನ್ವಯವೇ ಕಡ್ಡಾಯವಾಗಿ ಟೆಂಡರ್ ಮೌಲ್ಯ ಮಾಪನವನ್ನು ಕೈಗೊಂಡು ನಿಯಮ (25) ರಂತೆ ಅತ್ಯಂತ ಕಡಿಮೆ ದರ (Lowest Evaluated Price) ನೀಡಿದ ಅರ್ಹ ಟೆಂಡರುದಾರರನ್ನು ಗುರುತಿಸಿ ಗುತ್ತಿಗೆ ನೀಡಬೇಕಾಗುತ್ತದೆ. ಉಲ್ಲೇಖ (2) ರ ಸುತ್ತೋಲೆಯಲ್ಲಿ ಈ ವಿಷಯದ ಕುರಿತು ಸಮಗ್ರವಾಗಿ ವಿವರಿಸಿ ತಾಂತ್ರಿಕವಾಗಿ ಮತ್ತು ವಾಣಿಜ್ಯಾತ್ಮಕವಾಗಿ ಅರ್ಹರಾದ L1 ಟೆಂಡರುದಾರರಿಗೆ ಗುತ್ತಿಗೆ ನೀಡುವಂತೆ ತಿಳಿಸಲಾಗಿರುತ್ತದೆ. ಇದನ್ನು ಮತ್ತಮ್ಮೆ ಪುನರುಚ್ಚರಿಸುತ್ತಾ, ಟೆಂಡರ್ ಪ್ರಕ್ರಿಯೆಯ್ನು ಕಡ್ಡಾಯವಾಗಿ ಕೆ.ಟಿ.ಪಿ.ಪಿ ಕಾಯಿದೆ ಮತ್ತು ನಿಯಮಗಳಲ್ಲಿನ ಅವಕಾಶಗಳ ಅನ್ವಯ ಕೈಗೊಂಡು ಅರ್ಹ L1 ಗುತ್ತಿಗೆದಾರರಿಗೆ ಮಾತ್ರ ಗುತ್ತಿಗೆ ನೀಡಲು ತಿಳಿಸಿದೆ. ಕೆ.ಟಿ.ಪಿ.ಪಿ ಕಾಯಿದೆ ಮತ್ತು ನಿಯಮಗಳಲ್ಲಿ L1 ಟೆಂಡರುದಾರರನ್ನು ಹೊರತುಪಡಿಸಿ ಬೇರೆಯವರಿಗೆ ಗುತ್ತಿಗೆ ನೀಡಲು ಅವಕಾಶವಿರುವುದಿಲ್ಲ ಮತ್ತು ಯಾವುದೇ ಕಾರಣದಿಂದ L1 ಗುತ್ತಿಗೆದಾರರು ಒಪ್ಪಂದ ಮಾಡಿಕೊಳ್ಳದಿದ್ದಲ್ಲಿ ಅಥವಾ ಗುತ್ತಿಗೆ ನಿರ್ವಹಿಸಲು ಮುಂದೆ ಬರದಿದ್ದಲ್ಲಿ, ಅಥವಾ ಯಾವುದೇ ಕಾರಣದಿಂದ ಅನರ್ಹರಾದಲ್ಲಿ, ನಿಯಮಗಳ ಅನುಸಾರ ಅಂತಹ ಟೆಂಡರುದಾರರ EMD ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು, ಕಡ್ಡಾಯವಾಗಿ ಮರುಟೆಂಡರ್ ಕರೆಯಲು ಕ್ರಮವಹಿಸತಕ್ಕದ್ದು ಎಂದು ತಿಳಿಯಪಡಿಸಿದೆ.

6. ಕಾಮಗಾರಿಗಳ ಗುತ್ತಿಗೆಯಲ್ಲಿ ಪಾರದರ್ಶಕವಾದ ಟೆಂಡರ್ ಪ್ರಕ್ರಿಯೆ ಮತ್ತು ಕಾಮಗಾರಿಗಳ ಅನುಷ್ಠಾನ ಮತ್ತು ಬಿಲ್ಲುಗಳ ಜೇಷ್ಠತೆಯ ಕ್ರಮೇಣ ಪಾವತಿಸಲು ತಂತ್ರಾಂಶವನ್ನು ಒಳಗೊಂಡ ವ್ಯವಸ್ಥೆಯೊಂದನ್ನು ರೂಪಿಸಲು ತಿಳಿಸಿದೆ.

(ಐ.ಎಸ್.ಎನ್.ಪ್ರಸಾದ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಆರ್ಥಿಕ ಇಲಾಖೆ

**ಇವರಿಗೆ:**

ಸರ್ಕಾರದ ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳು.

126

ಸಂಖ್ಯೆ:ಆಇ 522 ವೆಚ್ಚ-12/2021

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:16.05.2022

## ಅಧಿಸೂಚನೆ

ವಿಷಯ : ನಿರ್ಮಾಣ ಕಾಮಗಾರಿಗಳೂ ಸೇರಿದಂತೆ ಸರಕು ಮತ್ತು ಸೇವೆಗಳ ಸಂಗ್ರಹಣೆಯ ಟೆಂಡರ್ ಮತ್ತು ಅಂದಾಜುಗಳ ಪರಿಶೀಲನೆಗೆ ಟೆಂಡರ್ ಪೂರ್ವ ಪರಿಶೀಲನೆ ಜಾರಿಗೆ ಬರುವ ಕುರಿತು.

ಉಲ್ಲೇಖ : (1) ಸರ್ಕಾರದ ಆದೇಶ ಸಂ:ಆಇ 522 ವೆಚ್ಚ-12/2021, ಬೆಂಗಳೂರು, ದಿನಾಂಕ:13.12.2021.

(2) ಸರ್ಕಾರದ ಆದೇಶ ಸಂ:ಆಇ 522 ವೆಚ್ಚ-12/2021, ಬೆಂಗಳೂರು, ದಿನಾಂಕ:07.05.022

*****

ಉಲ್ಲೇಖ (1) ರ ಸರ್ಕಾರದ ಆದೇಶದಲ್ಲಿ ರೂ.50.00 ಕೋಟಿಗಳನ್ನು ಮೀರಿದ ನಿರ್ಮಾಣ ಕಾಮಗಾರಿಗಳೂ ಸೇರಿದಂತೆ ಸರಕು ಮತ್ತು ಸೇವೆಗಳ ಸಂಗ್ರಹಣೆಯ ಟೆಂಡರ್ ಮತ್ತು ಅಂದಾಜುಗಳನ್ನು ಅವುಗಳ ಪ್ರಕಟಣೆ ಪೂರ್ವದಲ್ಲಿ ಟೆಂಡರ್ ಪೂರ್ವ ಪರಿಶೀಲನೆ ಮಾಡಲು ಟೆಂಡರ್ ಪೂರ್ವ ಪರಿಶೀಲನಾ ಸಮಿತಿ (Pre-Tender Scrutiny Committee) ಯನ್ನು ಸೃಜಿಸಿ, ಈ ಆದೇಶದ ಮೇರೆಗೆ ಕೈಗೊಳ್ಳಬೇಕಾದ ಸಂಗ್ರಹಣೆಯ ಅನ್ವಯಿಕೆಯ ದಿನಾಂಕವನ್ನು ಪ್ರತ್ಯೇಕವಾಗಿ ಅಧಿಸೂಚಿಸಲಾಗುವುದೆಂದು ತಿಳಿಸಲಾಗಿದೆ.

ಉಲ್ಲೇಖ (2) ರ ಸರ್ಕಾರದ ಆದೇಶದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಇಬ್ಬರು ಇತರೆ ಸದಸ್ಯರನ್ನೊಳಗೊಂಡ ಟೆಂಡರ್ ಪೂರ್ವ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ.

ಉಲ್ಲೇಖ (1) ರಲ್ಲಿನ ಸರ್ಕಾರದ ಆದೇಶವು ಸಂಗ್ರಹಣೆಯ ಅನ್ವಯಿಕೆಗಾಗಿ ದಿನಾಂಕ:01.06.2022 ರಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಕಾಂತಮ್ಮ ಎನ್.ಎಂ.
(ಕಾಂತಮ್ಮ ಎನ್.ಎಂ.)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)
16/5/2022

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಲು.

...2

ಪ್ರತಿ:

(1) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ.
(2) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು.
(3) ಮಹಾಲೇಖಪಾಲರು (ಎ&ಇ), ಕರ್ನಾಟಕ ಸರ್ಕಾರ, ಬೆಂಗಳೂರು.
(4) ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಸಭೆ / ಕರ್ನಾಟಕ ವಿಧಾನ ಪರಿಷತ್ತು.
(5) ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
(6) ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
(7) ಕಾರ್ಯದರ್ಶಿಗಳು, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು.
(8) ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
(9) ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್.
(10) ರಾಜ್ಯದ ಎಲ್ಲಾ ಇಲಾಖಾ ಮುಖ್ಯಸ್ಥರು.
(11) ರಾಜ್ಯದ ಎಲ್ಲಾ ನಿಗಮ ಮತ್ತು ಮಂಡಳಿಗಳ ಕಾರ್ಯನಿರ್ವಹಣಾಧಿಕಾರಿಗಳು.
(12) ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು.
(13) ಸರ್ಕಾರದ ವಿಶೇಷ ಕಾರ್ಯದರ್ಶಿಗಳು/ಸರ್ಕಾರದ ಅಪರ ಕಾರ್ಯದರ್ಶಿಗಳು/ಸರ್ಕಾರದ ಜಂಟಿ ಕಾರ್ಯದರ್ಶಿಗಳು/ಸರ್ಕಾರದ ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ.
(14) ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

# PROCEEDINGS OF THE GOVERNMENTOF KARNATAKA

Sub : Constitution of Pre-Tender Scrutiny Committee for Scrutiny of Tenders and Estimates for Procurement of Goods and Services including Construction Works – Reg.

Read : Government Order No:FD 522 EXP-12/2021, BENGALURU, Dated:13/12/2021.

PREAMBLE:

Government of Karnataka, vide Government Order, read at above, has decided to undertake the Pre-Tender Scrutiny of the tenders and estimates prepared for the Procurement of Goods and Services including Construction works, the value of which exceeds Rs.50.00 Crore, before they are published to enhance the transparency in the Public Procurements and also to secure competition and equal opportunity to all the tenderers. In this regard, Government has now decided to constitute one such Pre-Tender Scrutiny Committee and fix the remuneration and other facilities to be provided to this committee.

Hence the following order.

GOVERNMENT ORDER NO:FD 522 EXP-12/2021, BENGALURU, DATED: 07-05-2022

1. In view of the circumstances explained in the preamble, Government of Karnataka is pleased to constitute a Pre-Tender Scrutiny Committee headed by Hon'ble retired High Court Judge and two other members as below:

| | |
|---|---|
| Hon'ble Mrs.Justice Rathnakala,<br>Retired Judge,<br>High Court of Karnataka. | Head of the Committee |
| Sri. B.G.Gurupadaswamy,<br>Retired Secretary to Government,<br>Water Sources Department,<br>Government of Karnataka. | Engineering Expert |
| Sri. K.Nandakumar,<br>Retired Director,<br>Karnataka State Audit and Accounts Department,<br>Government of Karnataka. | Finance Expert |

2. The tenure of the retired Hon'ble High Court Judge and two other members on the Committee and the terms and conditions for the functioning of the Committee shall be as prescribed in the Government Order read above.

3. The Office of the Committee, as constituted above will be housed in Public Works Department. Suitably furnished office space, Government vehicle along with the driver to the Hon'ble retired High Court Judge and the two other members, support staff and other office staff have to be provided by the Public Works Department.

4. The consolidated remuneration payable to the retired Hon'ble High Court Judge and the two other members is fixed at Rs.2,00,000/-per month and Rs.1,00,000/- per month respectively. TA/DA for the travel, if any, undertaken in connection with the functions of the Pre- tender Scrutiny Committee shall be paid as per the applicable rates. Telephone charges of the residence including broadband and mobile bill not exceeding Rs.3000/-per month each shall be paid.

5. No other allowances except the remuneration and allowances fixed as above shall be given.

6. Drawing and Disbursing Officer for the purpose of this committee shall be as decided by the Additional Chief Secretary to the Government, Public Works Department. The Expenditure in this regard, is to be incurred out of the funds provided to the Department

This order shall come into force with immediate effect.

By order and in the name of
Governor of Karnataka

**(I.S.N.PRASAD)**
Additional Chief Secretary to Government
Finance Department

To:

The Compiler, Karnataka Gazette for publication in the next issue of the Gazette.

137

Copy to:

1. The Chief Secretary/Additional Chief Secretaries to Government
2. The Principal Secretaries and Secretaries to Government.
3. The Accountant General (A&E), Karnataka Bengaluru.
4. The Secretary, Karnataka Legislative Assembly/Council.
5. The Registrar, Karnataka High Court, Bengaluru.
6. The Registrar, Karnataka Lokayukta, Bengaluru.
7. The Secretary, Karnataka Public Services Commission, Bengaluru.
8. All Deputy Commissioners.
9. All the CEOs of Zilla Panchayats.
10. All Registrars of Universities.
11. All the Heads of Departments.
12. All the CEOs of Boards and Corporations.
13. All Internal Financial Advisors.
14. All Joint Secretaries/Deputy Secretaries/Special Officers/Under Secretaries to Government, Finance Department.
15. Section Guard File/Spare Copies.

192

GeM

e Marketplace

Dear Sole Proprietor,

We are writing to introduce you to Government e Marketplace (GeM) - a portal where all Government of India, State Government and PSE purchasing takes place. As a business owner you can register for free on the GeM website: gem.gov.in and bid for orders in just a few simple steps.

Sellers who use the GeM portal have an unmatched opportunity to increase their sales. In the last financial year, GeM portal facilitated over Rs 1,00,000 Crores in business for participants.

In addition, for sole proprietors conducting business on GeM, we have introduced a facility called GeM SAHAY, which is a mobile application where you can finance your purchase orders from GeM completely digitally and without collateral.

GeM Sahay is free to use (other than the charges payable to lenders) and can be downloaded here: https://play.google.com/store/apps/detailsid=in.sahay.gem

Get started by registering on the GeM website!

Regards,
Team GeM






Generated from eOffice by SHANTAPPA LAMANI, DPE-SECTION 3-ASST-INC(SLM), ASSISTANT, PUBLIC ENTERPRISES DEPARTMENT SEC on 24/05/2022 10:42 AM

C.O.No: 163/03

199

ಕರ್ನಾಟಕ ಸರ್ಕಾರ

ಸಂಖ್ಯೆ: ಸಾಉಇ 69 ಎಂಇಎ 2022

ನಿರ್ದೇಶಕರು (ಪ್ರಸರಣ)
10 JUN 2022
ಕ.ವಿ.ಪ್ರ.ನಿ.ನಿ.

ಕರ್ನಾಟಕ ಸರ್ಕಾರದ ಸಚಿವಾಲಯ,
2ನೇ ಹಂತ, 7ನೇ ಮಹಡಿ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:24.05.2022.

M.D.
09 JUN 2022
KPTCL

ಇಂದ:
ಸರ್ಕಾರದ ಕಾರ್ಯದರ್ಶಿ,
ಸಾರ್ವಜನಿಕ ಉದ್ದಿಮೆಗಳ ಇಲಾಖೆ.

ಇವರಿಗೆ:
ವ್ಯವಸ್ಥಾಪಕ ನಿರ್ದೇಶಕರು,
ಎಲ್ಲಾ 60 ನಿಗಮ ಮಂಡಳಿಗಳು.

DT GM(T)

ವಿಷಯ: ಟೆಂಡರ್ ಮತ್ತು ಕಾಮಗಾರಿಗಳ ಕುರಿತು ಸರ್ಕಾರದ ಮಾರ್ಗಸೂಚಿಗಳು ಹಾಗೂ Government e- Marketplace ನಲ್ಲಿ ರಾಜ್ಯದ ಸಾರ್ವಜನಿಕ ಉದ್ದಿಮೆಗಳು Online ಮೂಲಕ ವ್ಯವಹಾರ ನಡೆಸಲು ನೊಂದಣಿ ಮಾಡಿಕೊಳ್ಳುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ:ಆಇ 522 ವೆಚ್ಚ-12/2021, ದಿನಾಂಕ:07.05.2022
2. ಅ.ಸ ಪತ್ರ ಸಂಖ್ಯೆ:145/2022 ದಿನಾಂಕ:13.05.2022
3. Government e- Marketplace ಇವರ ಇ-ಮೇಲ್ ಪತ್ರ ದಿನಾಂಕ:12.05.2022
4. ಸರ್ಕಾರದ ಅಧಿಸೂಚನೆ ಸಂಖ್ಯೆ: ಆಇ 522 ವೆಚ್ಚ-12/2021, ದಿನಾಂಕ: 16.05.2022

***

CE (T&P) also

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಆದೇಶ ಮತ್ತು ಪತ್ರಗಳನ್ನು ಲಗತ್ತಿಸುತ್ತಾ, ಸದರಿ ಆದೇಶ, ಅಧಿಸೂಚನೆ ಹಾಗೂ ಪತ್ರಗಳಲ್ಲಿ ಸೂಚಿಸಿರುವನ್ವಯ ನಿರ್ಮಾಣ ಕಾಮಗಾರಿಗಳು, ಟೆಂಡರ್ ಪ್ರಕ್ರಿಯೆ, ಸರಕು ಸಂಗ್ರಹಣೆ ಮತ್ತು ಬಿಲ್ಲುಗಳ ಪಾವತಿಗೆ ಸಂಬಂಧಿಸಿದಂತೆ ಸೂಚನೆಗಳನ್ನು ಪಾಲಿಸುವಂತೆ ಹಾಗೂ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಟೆಂಡರ್ ಲಾಭಾಂಶವನ್ನು ಕಡ್ಡಾಯವಾಗಿ ಶೇ.5 ಕ್ಕೆ ಮಿತಿಗೊಳಿಸಿದೆ ಎಂದು ಹಾಗೂ Government e-Marketplace ನಲ್ಲಿ ರಾಜ್ಯದ ಸಾರ್ವಜನಿಕ ಉದ್ದಿಮೆಗಳು Online ಮೂಲಕ ವ್ಯವಹಾರ ನಡೆಸಲು ನೊಂದಣಿ ಮಾಡಿಕೊಳ್ಳುವಂತೆ ಈ ಮೂಲಕ ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

M. Gopalakrishna

(ಎಂ. ಗೋಪಾಲಕೃಷ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ(ಆಡಳಿತ)
ಸಾರ್ವಜನಿಕ ಉದ್ದಿಮೆಗಳ ಇಲಾಖೆ.

24/05

Corporate Office
KPTCL
Kaveri Bhavan
Bangalore
GM (T)

| | |
|---|---|
| SEE IT | |
| SEE PM | |
| AGM (Prcl) | |
| AGM (Civil) | ✓ |
| AGM (Eng) | |
| AGM (APCC) | |
| PS | |

156

4208